Trial version of e-PDF Document Converter v2.1

# Higher Secondary Model Examination Feb 2012

## HSE-I Kannada

Time: $2^1/_2$ Hours
Score: 80 Marks

---

- **ಎಲ್ಲಾ ಪ್ರಶ್ನೆಗಳನ್ನು ಚೆನ್ನಾಗಿ ಓದಿ ಅರ್ಥೈಸಿದ ಬಳಿಕ ಉತ್ತರಿಸಿರಿ.**
- **ಮೊದಲ ಹದಿನೈದು ನಿಮಿಷ ಕೂಲ್ ಓಫ್ ಸಮಯವಾಗಿದೆ.**

1. ನೀವು 'ತಪಶ್ಚರಣ ನಿಶ್ಚಯಮನನಾದಂ' ಎಂಬ ಕಾವ್ಯಭಾಗವನ್ನು ಓದಿರುವಿರಿ. ಬಾಹುಬಲಿಯು ತನ್ನೆಲ್ಲ ಸಂಪತ್ತನ್ನು ಅಣ್ಣನಾದ ಭರತನಿಗೆ ಧಾರೆಯೆರೆದು ತಪಸ್ಸಿಗೆ ಹೋಗುತ್ತಾನೆ. ಆತನ ಈ ನಿಲುವು ಸಮಂಜಸವಾದುದೇ? ನಿಮ್ಮ ಅನಿಸಿಕೆಗಳೇನು? ವಿವರಿಸಿರಿ. (5)

2. ಏನಿ ಬಂದಿರಿ ಹದುಳಿದ್ದಿರೆ ಎಂದಡೆ
ನಿಮ್ಮೈಸಿರಿ ಹಾರಿ ಹೋಹುದೆ?
ಕುಳ್ಳಿರೆಂದಡೆ ನೆಲ ಕುಳಿ ಹೋಹುದೆ?
ಒಡನೆ ನುಡಿದಡೆ ಸಿರಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ
ಮೂಗಕೊಯ್ವುದ ಮಾಬನೆ ಕೂಡಲಸಂಗಮದೇವಯ್ಯ

   ಮನೆಗೆ ಬರುವ ಅಥಿತಿಗಳನ್ನು ಬರಮಾಡಿಕೊಳ್ಳುವ ರೀತಿಯನ್ನು ಬಸವಣ್ಣನವರು ಈ ವಚನದಲ್ಲಿ ಧ್ವನಿಸಿದ್ದಾರೆ. ಆಧುನಿಕ ಜೀವನದ ಭರಾಟೆಯಲ್ಲಿ ನಾವು ಇಂದು ಮನೆಗೆ ಬಂದ ಅಥಿತಿಗಳನ್ನು ಸೂಕ್ತರೀತಿಯಲ್ಲಿ ಸತ್ಕರಿಸುವುದಕ್ಕೆ ಸಮರ್ಥರಾಗಿದ್ದೇವೆಯೇ? ನಿಮ್ಮ ಅಭಿಪ್ರಾಯಗಳನ್ನು ಕಿರುಲೇಖನ ರೂಪದಲ್ಲಿ ಬರೆಯಿರಿ. (5)

3. ಜರ್ಮನಿಯವರಿಗೆ ಸಂಸ್ಕೃತ ಭಾಷೆಯು **ಉಕ್ಕಿನ ಕಡಲೆ**ಯಾಗಿ ಪರಿಣಮಿಸಿದ ಹಾಗೆ ಕನ್ನಡಿಗರಿಗೂ ವಚನವಾಙ್ಮಯವು ಉಕ್ಕಿನ ಕಡಲೆಯಾಗಿಯೇ ಪರಿಣಮಿಸಿಬಿಟ್ಟಿರಲಿಲ್ಲವೇ?.......ಆ ಒಟ್ಟಿಲನ್ನು ಕರಗಿಸುವ ಉಪಾಯ ಯೋಜನೆಯಲ್ಲಿ ಕೊರಗಿ **ಕೈಕಾಲು ಕಳೆದುಕೊಳ್ಳು**ವ ಹೊತ್ತಿಗೆ ಅದಾವುದೋ ಒಂದು ಆಶಾಕಿರಣವು ಅದೆಲ್ಲಿಂದಲೋ ನುಸುಳಿ ಬಂದು ಬೆಂಬಲಕ್ಕೆ ನಿಂತಿತು.

   ದಪ್ಪ ಅಕ್ಷರದಲ್ಲಿ ಬರೆದ ನುಡಿಗಟ್ಟುಗಳನ್ನುಪಯೋಗಿಸಿಕೊಂಡು ನಿಮ್ಮದೇ ಆದ ಎರಡು ವಾಕ್ಯಗಳನ್ನು ರಚಿಸಿರಿ. (2)

Please purchase 'e-PDF Converter and Creator' on http://www.e-pdfconverter.com to remove this message.

Trial version of e-PDF Document Converter v2.1

4. ‘ಕೋಳೂರ ಕೊಡಗೂಸಿನ ರಗಳೆ’ ಯನ್ನು ನೀವು ಓದಿರುವಿರಿ. ಮುಗ್ಧಳಾದ ಕೊಡಗೂಸನ್ನು ಶಿವನು ಕಾಡಿಸಿ ಪೀಡಿಸಿದ್ದು ಸರಿಯೇ? ಚರ್ಚಿಸಿರಿ. (4)

5. ‘ಭೇದದಲಿ ಹೊಕ್ಕಿರಿದನೋ’ ಎನ್ನುವ ಕಾವ್ಯಭಾಗವನ್ನು ನೀವು ಓದಿರುವಿರಿ. ಈ ಕಾವ್ಯಭಾಗದಲ್ಲಿ ಮೂಡಿಬಂದ ಕರ್ಣನ ಪಾತ್ರಚಿತ್ರಣವನ್ನು ಮಾಡಿರಿ. (6)

6. ‘ಬುದ್ಧ’ ಕವನವನ್ನು ಅಭ್ಯಸಿಸುವಾಗ ಕವಿ ದ. ರಾ. ಬೇಂದ್ರೆಯವರನ್ನು ಕೂಡಾ ಪರಿಚಯಿಸಿಕೊಂಡಿರಬೇಕಲ್ಲವೇ? ಇವರ ಪರಿಚಯ ಲೇಖನವನ್ನು ತಯಾರಿಸುವುದಕ್ಕಾಗಿ ಮಾಹಿತಿ ಸಂಗ್ರಹಿಸಲು ಅಗತ್ಯವಾದ ಪ್ರಶ್ನಾವಳಿಯೊಂದನ್ನು ತಯಾರಿಸಿರಿ. (5)

7. ‘ಹೊಸಬಾಳಿನ ಗೀತೆ’ ಕವನದ ಸ್ವಾರಸ್ಯವನ್ನು ಬರೆಯಿರಿ. (6)

8. ಮಾಸ್ತಿಯವರ ‘ಜೋಗ್ಯೋರ ಅಂಜಪ್ಪನ ಕೋಳೀಕತೆ’ ಯಲ್ಲಿ ಆಡುಮಾತಿನ ಸೊಗಸನ್ನು ನೀವು ಗಮನಿಸಿದ್ದೀರಿ. ಪಾಠಭಾಗದಿಂದ ಆಯ್ದ ಈ ಕೆಳಗಿನ ವಾಕ್ಯಗಳನ್ನು ಶಿಷ್ಟಗನ್ನಡಕ್ಕೆ ಪರಿವರ್ತಿಸಿರಿ. (5)

ಏನಪ್ಪು, ನಿನ್ಗೆ ಮೇಸ್ಟ್ರೀಟು ಕೆಲಸ ಬಂತಂತಲ್ಲ. ಬಾಳಾ ಸಂತೋಸ.
ಕೋಳಿ ನನ್ನ ತಾವಿತ್ತು, ಆದ್ರೆ ಅದನ ನಾನು ಕದೀಲಿಲ್ಲ.
ಸೈ, ನನ್ನ ವಂತಕಾರಿ, ಅದ್ನೇ ಅಣ್ಣ ನಾನು ಹೇಳೋಕೆ ಬಂದಿದ್ದು ನಿನ್ಗೆ.
ಏನಯ್ಯ ಬಹಳ ಸಂಪನ್ನನ ಹಂಗೆ ಮಾತಾಡ್ತೀಯ.
ನಮ್ಮದು ಅಲ್ಲ ಅನ್ನೋ ಹಂಗದೆ, ಹೌದು ಅನ್ನೋ ಹಂಗದೆ.

9. ಕೆಳಗಿನ ಗದ್ಯಬಾಗವನ್ನು ಕನ್ನಡಕ್ಕೆ ಭಾಷಾಂತರಿಸಿರಿ. (6)

The citizen has both rights and duties. Some people think only of their rights. They forget their duties on account of their selfishness. But, if we don’t perform our duties, how can we claim our rights? India gives much to us and expects much from us in return. Everyone has a right to have enough food to eat, if he earns it by his work. Here the state has a great responsibility. It must try to find food for all people to be sold at prices which they can afford to pay. The government should therefore try to improve food production by helping the farmers in many ways,

Selfishness-ಸ್ವಾರ್ಥತೆ, Perform-ಮಾಡು, Claim-ಹಕ್ಕಿನಿಂದ ಕೇಳು, Expect-ನಿರೀಕ್ಷಿಸು, Enough-ಸಾಕಷ್ಟು, Afford-ಕೊಳ್ಳಲು ಸಮರ್ಥನಾಗು

Please purchase 'e-PDF Converter and Creator' on http://www.e-pdfconverter.com to remove this message.

Trial version of e-PDF Document Converter v2.1

10. ನಿಮ್ಮ ಜಿಲ್ಲೆಯ ಯಾವುದಾದರೊಂದು ಪ್ರವಾಸಿ ತಾಣದ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಪ್ರವಾಸೋದ್ಯಮ ಇಲಾಖೆಯ ಸಚಿವರಿಗೆ ಸಮರ್ಪಿಸಲು ಒಂದು ಮನವಿಯನ್ನು ಸಿಧ್ಧಪಡಿಸಿರಿ. (6)

11. 'ಮಾವ ಕೊಡಿಸಿದ ಕೋಟು' ಎನ್ನುವ ಹಾಸ್ಯಪ್ರಧಾನ ಪ್ರಬಂಧದಲ್ಲಿ 'ಬಡವನ ಸಿಟ್ಟು ದವಡೆಗೆ ಮೂಲ' ಎನ್ನುವ ಗಾದೆ ಮಾತನ್ನು ಗಮನಿಸಿದ್ದೀರಲ್ಲವೇ? ಈ ಗಾದೆ ಮಾತನ್ನು ವ್ಯಾಖ್ಯಾನಿಸಿರಿ. (6)

12. ಈ ಕೆಳಗಿನ ವಾಕ್ಯದಲ್ಲಿ ಲೇಖನ ಚಿಹ್ನೆಗಳನ್ನು ಬಳಸಿರಿ. (2)
ಜೀವನ ದಾರುಣವಾದುದು ಅದು ಕಣ್ಣೀರಿನ ಸಂತೆ ಅದನ್ನು ನೆಚ್ಚಿದವನಿಗೆ ದು:ಖವಲ್ಲದೆ ಸುಖವಿಲ್ಲ ಎಂಬ ತೀರ್ಮಾನ ನನಗಂತು ಒಪ್ಪಿಗೆಯಿಲ್ಲ.

13. ಯುದ್ಧ ಎನ್ನುವುದು ಮಾನವ ಕುಲವನ್ನು ಸಾಮೂಹಿಕವಾಗಿ ನಾಶಮಾಡುವ ಕುತ್ತು ಎನ್ನುವ ವಿಚಾರವನ್ನು 'ಕಾಲಜ್ಞಾನಿ ಕನಕ' ನಾಟಕದ ಆರಂಭ ಭಾಗದಿಂದ ತಿಳಿದುಕೊಂಡಿದ್ದೀರಲ್ಲವೇ? ಯುದ್ಧದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಪ್ರಬಂಧವೊಂದನ್ನು ಸಿಧ್ಧ ಪಡಿಸಿರಿ.

**ಅಥವಾ**

'ಕಾಲಜ್ಞಾನಿ ಕನಕ' ನಾಟಕದಲ್ಲಿ ಸಾಮಾಜಿಕ ಜೀವನದ ಚಿತ್ರಣ ಎಷ್ಟರ ಮಟ್ಟಿಗೆ ಮೂಡಿ ಬಂದಿದೆ? ವಿವರಿಸಿರಿ. (8)

14. ಕೆಳಗಿನ ಪದ್ಯಗಳನ್ನು ಸರಳ ಗದ್ಯರೂಪಕ್ಕೆ ಪರಿವರ್ತಿಸಿರಿ. (6)

ಇನಿಯವು ಮೊದಲೊಳ್ ನಂಜಿನ
ಪನಿವೊಲ್ ಬಳಿಕೆಯ್ದೆ ಮುಳಿದು ಕೊಂದಿಕ್ಕುವುವಿಂ
ತೆನೆಯೆನೆ ವಿಷಯಸುಖಾಸ್ವಾ
ದನದೊಳ್ ಲಂಪಟರಿದೇಕೆಯೋ ನರಪಶುಗಳ್

ಕಿವಿ ಮೆಯ್ ಕಣ್ ನಾಲಗೆ ಮೂ
ಗಿವು ಶಬ್ದ ಸ್ಪರ್ಶ ರೂಪರಸಗಂಧ ಸಮು
ದ್ಭವ ಸುಖದೊಳ್ ತೊಡರ್ವುದೆ ಸುಖ
ಮವಿಲ್ಲದಂದಿಲ್ಲದರ್ಕತೀಂದ್ರಿಯಮೆ ಸುಖಂ

15. ಹೊಂದಿಸಿ ಬರೆಯಿರಿ. (5)

| | | |
|---|---|---|
| ಪಂಪ | ಹೊಸಗನ್ನಡ ಕವಿತೆ | ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು |
| ಬೇಂದ್ರೆ | ಕೀರ್ತನೆ | ಬಹಳ ಸಂಪನ್ನನ ಹಂಗೆ ಮಾತಾಡ್ತೀಯ |

Please purchase 'e-PDF Converter and Creator' on http://www.e-pdfconverter.com to remove this message.

Trial version of e-PDF Document Converter v2.1

| | | |
|---|---|---|
| ಮಾಸ್ತಿ | ಚಂಪೂಕಾವ್ಯ | ಅತೀಂದ್ರಿಯಮೆ ಸುಖಂ |
| ಕುಮಾರವ್ಯಾಸ | ಸಣ್ಣ ಕತೆ | ಮಾತಾಪಿತರನು ಬಳಲಿಸಿದಾತನು |
| ಪುರಂದರದಾಸ | ಭಾಮಿನಿ ಷಟ್ಪದಿ | ಬುಧ್ಧನ ಜಯಂತಿಗಿದೆ ಜಯವೆಂದಿಗು |

16. ಕನ್ನಡದ ಅಭಿವೃಧ್ಧಿಗಾಗಿ ಕನ್ನಡಿಗರು ಕಂಕಣಬಧ್ಧರಾಗಬೇಕೆಂಬ ಆಶಯವನ್ನು 'ಕನ್ನಡವೇ ನನ್ನ ಧರ್ಮ' ಎನ್ನುವ ಪ್ರಬಂಧದಿಂದ ತಿಳಿದಿರುವಿರಲ್ಲವೇ? ಕನ್ನಡ ಭಾಷೆಯ ಬಗ್ಗೆ ಜನತೆಯಲ್ಲಿ ಜಾಗೃತಿ ಮೂಡಿಸುವಂತೆ ಮೂರು ಘೋಷಣ ವಾಕ್ಯಗಳನ್ನು ರಚಿಸಿರಿ. (3)

Prepared by: Harisha. G
SVVHSS Miyapadavu

Please purchase 'e-PDF Converter and Creator' on http://www.e-pdfconverter.com to remove this message.